**CC. No.1559/2022** **PW - 1**

ಪ್ರಮಾಣೀಕರಿಸಲಾದ ದಿನಾಂಕಃ- **25.07.2025.**

ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಂ. ಸಿ. ಪಿ ವಕೀಲರಿಂದಃ-

ಆರೋಪಿ 6 – 7 ವರ್ಷದಿಂದ ನಮ್ಮ ತೋಟಕ್ಕೆ ಆಳುಗಳನ್ನು ತಂದು ಬಿಡುತ್ತಿದ್ದು ನನಗೆ ಪರಿಚಯವಾಗಿರುತ್ತಾನೆ. ನನಗೆ ಪರಿಚಯವಾದಾಗಿನಿಂದ ಆರೋಪಿ ಹಣವನ್ನು ಸಾಲ ಪಡೆಯುತ್ತಿದ್ದ. ಮೊದಲು ಕಡಿಮೆ ಮೊತ್ತದ ರೂ. 10 – 20 ಸಾವಿರ ಹಣವನ್ನು ತೀರಿಸಿದ್ದಾನೆ ಈಗ ತೀರಿಸಿಲ್ಲ. ಕಡಿಮೆ ಮೊತ್ತದೆ ರೂ. 10, 20 ಮತ್ತು 50 ಸಾವಿರ ಹಣವನ್ನು ಪಡೆದು ಹಿಂದಿರುಗಿಸಿರುತ್ತಾನೆ. ಈ ಪ್ರಕರಣದ ಮೊತ್ತವನ್ನು ಹಿಂದಿರುಗಿಸಿರುವುದಿಲ್ಲ. ಹಿಂದೆ ಕೊಟ್ಟ ಕಡಿಮೆ ಮೊತ್ತದ ಹಣಕ್ಕೆ ಚೆಕ್ ಅನ್ನು ಪಡೆದಿರುವುದಿಲ್ಲ. ಆರೋಪಿ ಜೊತೆ ಶುಂಠಿ ಕೃಷಿ ಮಾಡಿರುವುದಿಲ್ಲ. ಕೊಡಿಗಿನಿಂದ ಹೊರಗೆ ಯಾವುದೇ ಆಸ್ತಿಯನ್ನು ಪಡೆದು ಆರೋಪಿಗೆ ಬೋಗ್ಯಕ್ಕೆ ಕೊಟ್ಟಿರುವುದಿಲ್ಲ.

ಆರೋಪಿಗೆ ರೂ. 2 ಲಕ್ಷ 60 ಸಾವಿರ ಹಣವನ್ನು ನಗದಾಗಿ, 500 ರೂ ಮುಖಬೆಲೆಯ ಕೊಟ್ಟಿರುತ್ತೇನೆ. ಮನೆಯಲ್ಲಿ 1 ಲಕ್ಷ ವಿದ್ದು, ಆರೋಪಿ 10 ದಿನಗಳ ಹಿಂದೆ ಹಣವನ್ನು ಕೇಳಿದ್ದು ಮನೆಯಲ್ಲಿ ಇದ್ದ 150 ಚೀಲ ಕಾಫಿಯನ್ನು ಮಾರಿ ಉಳಿದ ಹಣ ಸೇರಿಸಿ ಕೊಟ್ಟಿರುತ್ತೇನೆ. ಕಾಫಿಯನ್ನು ಮಾರಿದ್ದಕ್ಕೆ ದಾಖಲೆ ಕೊಟ್ಟಿಲ್ಲ. ಕಾಫಿಯನ್ನು ಮಾರಿದ ಹಣ ನಗದು ರೂಪದಲ್ಲಿ ಕೊಟ್ಟಿದ್ದರು. ನಾನು ದ್ವಿತೀಯ ಪಿ. ಯು. ಸಿ. ಓದಿದ್ದೇನೆ. ನನಗೆ 2 ಬ್ಯಾಂಕ್ ಖಾತೆಗಳಿರುತ್ತವೆ. ನನ್ನಿಂದ ಆರೋಪಿ 2 ಲಕ್ಷ 60 ಸಾವಿರ ಹಣ ಪಡೆದಿಲ್ಲ ಮೇಲೆ ಹೇಳಿದಂತೆ ರೂ. 50 ಸಾವಿರ ಹಣವನ್ನು ಮಾತ್ರ ಆರೋಪಿ ಪಡೆದಿದ್ದು, ಆಗ ನಿ. ಪಿ. 1 ಚೆಕ್ ಅನ್ನು ನಾನು ಆ ಸಾಲಕ್ಕೆ ಪಡೆದಿರುತ್ತೇನೆ ಮತ್ತು ರೂ. 50 ಸಾವಿರ ಹಣವನ್ನು ಆರೋಪಿ ತೀರಿಸಿರುತ್ತಾನೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

**Sd/xxx-**
ಸಿವಿಲ್ ನ್ಯಾಯಾಧೀಶರು, ಪೊನ್ನಂಪೇಟೆ